# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 25-11-2022

## ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 207/2022 ಕಲಂ 392 ಐಪಿಸಿ :-

**ದಿನಾಂಕ 24/11/2022 ರಂದು 1230 ಗಂಟೆಗೆ ಫಿರ್ಯಾದುದಾರರಾದ ಶ್ರೀ ಪ್ರಜ್ವಲ ತಂದೆ ಜೈಭೀಮ ಕಂಠಿ ವಯ:18 ವರ್ಷ ಉ:ವಿಧ್ಯಾರ್ಥಿ ಸಾ:ನ್ಯೂ ಭೀಮ ನಗರ ಹಳ್ಳಿಖೇಡ(ಬಿ) ತಾ:ಹುಮನಾಬಾದ ಜಿಲ್ಲಾ:ಬೀದರ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನೆAದರೆ ಫಿರ್ಯಾದಿಯು ತನ್ನ ಗೆಳೆಯನಾದ ಸುರೇಶ ತಂದೆ ರಮೇಶ ಸಾ:ಕುಂಬಾರವಾಡಾ ಬೀದರ ಇವನ ಹುಟ್ಟುಹಬ್ಬ ಇದ್ದ ಪ್ರಯುಕ್ತ ಬೀದರಕ್ಕೆ ಹೋಗಿದ್ದು ಇವರ ಹತ್ತಿರ ಒಂದು ಒನ ಪ್ಲಸ ನಾರ್ಡ ಸಿಇ2 ಮೊಬೈಲನ್ನು ಸುಮಾರು ಆರು ತಿಂಗಳ ಹಿಂದೆ ಖರೀದಿಸಿದ್ದು ಅದರ ಐ.ಎಮ್.ಇ.ಐ. ಸಂಖ್ಯೆ. 860218061949498 ಮತ್ತು 860218061949480 ಇರುತ್ತದೆ. ಆವಾಗ ಅದರಲ್ಲಿ ಸಿಮ್. ಸಂಖ್ಯೆ. 9538440295 ಇತ್ತು. ಅದರ ಅಂದಾಜು ಕಿಮ್ಮತ್ತು 25,000/-ರೂ. ಇರುತ್ತದೆ. ಹೀಗಿರುವಾಗ ದಿನಾಂಕ 21/11/2022 ರಂದು ಮಧ್ಯಾಹ್ನ 02:10 ಪಿ.ಎಮ್. ಗಂಟೆಯ ಸಮಯಕ್ಕೆ ಗ್ರಾಮಕ್ಕೆ ಹೋಗಲು ಬೀದರ ನಗರದ ಬಸ್ ಡೀಪೂ ನಂ 2 ಹತ್ತೀರ ರೋಡಿನ ಮೇಲೆ ಫೋನಿನಲ್ಲಿ ಮಾತನಾಡುತ್ತಾ ಹೋಗುತ್ತಿರುವಾಗ, ಹಿಂದಿನಿAದ ಅಂದರೆ ತಗಾರೆ ಕ್ರಾಸ ಕಡೆಯಿಂದ ಒಂದು ಬಜಾಜ ಪಲ್ಸಾರ ಮೊಟರ ಸೈಕಲ ಮೇಲೆ ಮೂರು ಜನ ಅಪರಿಚಿತ ಕಳ್ಳರು ಬಂದು ಕೈಯಿಂದ ಮೊಬೈಲನ್ನು ಕಸಿದುಕೊಂಡು ಕೇಂದ್ರ ಬಸ್ ನಿಲ್ದಾಣ ಕಡೆಗೆ ಹೋಗಿರುತ್ತಾರೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.**

## ಮಾರ್ಕೇಟ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 93/2022 ಕಲಂ 457, 380, 511 ಐಪಿಸಿ ;-

**ದಿನಾಂಕ 24-11-2022 ರಂದು 1030 ಗಂಟೆಯ ಸುಮಾರಿಗೆ ಫಿರ್ಯಾದಿ ಶ್ರೀ ಭಾಸ್ಕರ ತಂದೆ ಶಿವರಾಮ ಮಾಳಗೆ ವಯ 59 ವರ್ಷ ಉ;ಮುಖ್ಯ ಲಿಪಿಕ ಅಧಿಕಾರಿಗಳು, ಪ್ರಧಾನ ಹಿರಿಯ ದಿವಾಣಿ ಮತ್ತು ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಬೀದರ ಇವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೆನAದರೆ, ದಿನಾಂಕ 24-11-2022 ರಂದು 0930 ಗಂಟೆಯ ಸುಮಾರಿಗೆ ತನ್ನ ಕರ್ತವ್ಯಕ್ಕೆ ಹಾಜರಾದಾಗ ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ 23-11-2022 ರಂದು ಸಾಯಂಕಾಲ 1800 ಗಂಟೆಯಿAದ ದಿನಾಂಕ 24-11-2022 ರಂದು ಮುಂಜಾನೆ 1000 ಗಂಟೆ ವರೆಗೆ ಕಾವಲು ಕರ್ತವ್ಯಕ್ಕೆ ನೇಮಿಸಿದ ಅಟೆಂಡರ ಕೆಲಸ ಮಾಡುತ್ತಿರುವ ರಾಹುಲ ತಂದೆ ದತ್ತಾತ್ರೆ ಸಾ:ಡಿ.ದೇವರಾಜ ಅರಸ ಕಾಲೋನಿ ಬೀದರ ಇವರು ತಿಳಿಸಿದೆನಂದರೆ, ದಿನಾಂಕ 24-11-2022 ರಂದು 0330 ಂಟೆಯಿAದ 0430 ಗಂಟೆಯ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಮಾನ್ಯ ನ್ಯಾಯಾಲಯದ ಲೆಕ್ಕ ಪತ್ರ ಶಾಖೆಯ ಬಾಗಿಲಿನ ಬೀಗ ಮುರಿದು ಒಳಗೆ ಇದ್ದ ವಸ್ತುಗಳನ್ನು ಕಳವು ಮಾಡಲು ಪ್ರಯತ್ನಿಸಿರುತ್ತಾರೆ ಎಂದು ತಿಳಿಸಿದ ಕೂಡಲೇ ಿಕ್ಕ ಶಾಖೆಯ ಕೋಣೆಗೆ 0940 ಗಂಟೆಯ ಸುಮಾರಿಗೆ ಹೋಗಿ ನೋಡಲಾಗಿ, ಕಳವು ಮಾಡಲು ಪ್ರಯತ್ನಿಸಿದ್ದು ಕಂಡುಬರುತ್ತದೆ. ನಂತರ ಗೊತ್ತಾಗಿದನೆಂದರೆ, ಮಾನ್ಯ ನ್ಯಾಯಾಲಯದ ಆವರಣದಲ್ಲಿರುವ ಪ್ರಕಾಶ ತಂದೆ ಬಸವಣಪ್ಪಾ ಸಾ:ಚೊಂಡಿ ಗಲ್ಲಿ ಬೀದರ ರವರ ಚಹಾ ಕ್ಯಾಂಟೀನಿನ ಈ ಮೇಲಿನ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಬೀಗ ಮುರಿದು ಕ್ಯಾಂಟಿನ ಒಳಗೆ ಪ್ರವೇಶಿಸಿ ಒಳಗೆ ಇದ್ದ ಚಹಾ ಪುಡಿ ಅಂದಾಜು 1 ಕೆ.ಜಿ. ಅಂದಾಜು ಕಿಮ್ಮತ್ತು 400/- ರೂ ಹಾಗೂ ಒಂದು ಪೇಟಿಎಂ ಚಾರ್ಜರ ಇದರ ಅಂದಾಜು ಕಿಮ್ಮತ್ತು 200/-ರೂ ಕಳವು ಮಾಡಿಕೊಂಡು ಹೋಗಿರುತ್ತಾರೆಂದು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.**

## ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 118/2022 ಕಲಂ 279, 304(ಎ) ಐಪಿಸಿ :-

**ದಿನಾಂಕ 24/11/2022 ರಂದು ರಾತ್ರಿ 22:30 ಗಂಟೆಗೆ ಫಿರ್ಯಾದಿ ಶ್ರೀ ಜಗನ್ನಾಥ ತಂದೆ ಅಮೃತಪ್ಪಾ ಬೀರಾದರ ವಯ 65 ವರ್ಷ ಜಾ;ಲಿಂಗಾಯತ ಉ;ನಿವೃತ್ತ ಸರಕಾರಿ ನೌಕರ ಸಾ;ಕಲ್ಲೂರ ಸದ್ಯ ಬಸವನಗರ ಹುಮನಾಬಾದ ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಂಶವೆನAದರೆ ದಿನಾಂಕ 24/11/2022 ರಂದು ರಾತ್ರಿ ಇವರ ಮಗನಾದ ಮಲ್ಲಿಕಾರ್ಜುನ ಈತನಿಗೆ ರಾ ಹೆ 65 ರೋಡ ಚಿದ್ರಿ ಬೈಪಾಸ ಹತ್ತಿರ ಯಾವುದೋ ಒಂದು ಅಪರಿಚಿತ ವಾಹನವನ್ನು ಡಿಕ್ಕಿ ಮಾಡಿದ್ದರಿಂದ ಇವರ ಮಗನಾದ ಮಲ್ಲಿಕಾರ್ಜುನ ಭಾರಿ ರಸ್ತೆ ಅಪಘಾತವಾಗಿ ತಲೆಯ ಎಡ ಮತ್ತು ಹಿಂಭಾಗದಲ್ಲಿ ಭಾರಿ ರಕ್ತಗಾಯವಾಗಿರುತ್ತದೆ, ಬಲಕೈ ಭುಜಕ್ಕೆ ಭಾರಿ ಗುಪ್ತಗಾಯ, ಬಲ ಮತ್ತು ಎಡ ಕಾಲಿನ ತೋಡೆಗೆ ಭಾರಿ ಗುಪ್ತಗಾಯ ಹಾಗು ಬಲ ಸೊಂಟಕ್ಕೆ ಭಾರಿ ಗುಪ್ತಗಾಯವಾಗಿ ಸ್ಥಳದಲ್ಲಿಯೇ ಮೃತ್ತಪಟ್ಟಿದ್ದು ಇರುತ್ತದೆ ಅಪರಿಚೀತ ವಾಹನ ಡಿಕ್ಕಿ ಮಾಡಿಕೊಂಡು ಸೋಲಾಪೂರ ಕಡೆ ಹೋಗಿರುತ್ತದೆ ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.**